ನೀರನ್ನು ಮಿತವಾಗಿ ಬಳಸಿ"
"ಕನ್ನಡದಲ್ಲೇ ವ್ಯವಹರಿಸಿ"

Fax : 080-22945102
Phone : 22945102
www.bwssb.gov.in

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560 009.

ಸಂಖ್ಯೆ : ಬೆಂಜಮಂ
No : BWSSB ]ಮುಅಅ-ಕಾ/ಸಿಗು-07/ 5012 /2017-18

ದಿನಾಂಕ
Date ] 21.02.18

## ಅಧಿಸೂಚನೆ

ವಿಷಯ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಮಾಪನ ಓದುಗರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತ ಹೊಂದಿರುವ ನೌಕರರನ್ನು ಮಾಪನ ಓದುಗ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಮಂಡಳಿ ಸಭೆಯ ನಿರ್ಣಯ ದಿನಾಂಕ: 15.12.2016.
2. ಮುಖ್ಯ ಅಭಿಯಂತರರು(ನಿರ್ವಹಣೆ) ರವರ ಟಿಪ್ಪಣಿ ದಿನಾಂಕ: 09.02.2018.
3. ಕಛೇರಿ ಟಿಪ್ಪಣಿಗೆ ಮಾನ್ಯ ಅಧ್ಯಕ್ಷರು ದಿನಾಂಕ: 17.02.2018 ರಂದು ನೀಡಿರುವ ಅನುಮೋದನೆ.

---**---

ಪ್ರಸ್ತುತ ಬೆಂಗಳೂರು ಜಲಮಂಡಳಿಯಲ್ಲಿ ಮಾಪನ ಓದುಗರ ಕೊರತೆಯಿದ್ದು, ಮಂಡಳಿಯ ಆದಾಯಕ್ಕೆ ಧಕ್ಕೆಯುಂಟಾಗುತ್ತಿರುತ್ತದೆ. ಈಹಿನ್ನೆಲೆಯಲ್ಲಿ ಮಂಡಳಿಯ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಮಾಪನ ಓದುಗರ ಕೊರತೆಯನ್ನು ಸರಿದೂಗಿಸಲು, ಈಗಾಗಲೇ ಮಂಡಳಿಯಲ್ಲಿ ಕಾರ್ಯನಿರ್ವಹಿಸಿ ವಯೋಮಿತಿ ಮೇರೆಗೆ ನಿವೃತ್ತಿ ಹೊಂದಿರುವ ಮಾಪನ ಓದುಗರನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳುವ ಕುರಿತು ಇಚ್ಛೆಯುಳ್ಳ ಅರ್ಹ ನಿವೃತ್ತ ನೌಕರರಿಂದ ಈ ಮುಂದಿನಂತೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ/ ಸೇವಾ ಅರ್ಹತೆ |
|---|---|---|
| 1. | ಮಾಪನ ಓದುಗ (ಗುತ್ತಿಗೆ ಆಧಾರದ ಮೇಲೆ) | 1. ಬೆಂಗಳೂರು ಜಲಮಂಡಳಿಯಲ್ಲಿ ಜಲಪರಿವೀಕ್ಷಕ/ ಮಾಪನ ಓದುಗರಾಗಿ ಕರ್ತವ್ಯ ನಿರ್ವಹಿಸಿ ವಯೋ ನಿವೃತ್ತಿ/ಸ್ವಯಂ ನಿವೃತ್ತಿ ಹೊಂದಿರಬೇಕು.<br>2. 65 ವರ್ಷಗಳು ವಯಸ್ಸು ಒಳಗಿನವರಾಗಿರಬೇಕು ಮತ್ತು ಆರೋಗ್ಯವಾಗಿ ಸದೃಢರಾಗಿರಬೇಕು. |

**ಈ ಕೆಳಕಂಡ ಕಛೇರಿಗಳಲ್ಲಿ ಮಾಪನ ಓದುಗರ ಅವಶ್ಯಕತೆ ಇರುತ್ತದೆ.**

| ಕ್ರ. ಸಂ. | ಉಪವಿಭಾಗ | ಮಾಪನ ಓದುಗರ ಸಂಖ್ಯೆ |
|---|---|---|
| 1. | ಸಕಾನಿಅ(ವಾಯವ್ಯ)–3 | 03 |
| 2. | ಸಕಾನಿಅ(ಕೇಂದ್ರ)–2 | 02 |
| 3. | ಸಕಾನಿಅ(ಆಗ್ನೇಯ)–3 | 03 |
| 4. | ಸಕಾನಿಅ(ಕೇಂದ್ರ)–3 | 08 |
| 5. | ಸಕಾನಿಅ(ಈಶಾನ್ಯ)–3 | 04 |
| 6. | ಸಕಾನಿಅ(ನೈರುತ್ಯ)–1 | 06 |
| 7. | ಸಕಾನಿಅ(ಆಗ್ನೇಯ)–2 | 02 |
| 8. | ಸಕಾನಿಅ(ಪೂರ್ವ)–1 | 04 |
| 9. | ಸಕಾನಿಅ(ದಕ್ಷಿಣ)–4 | 04 |
| 10. | ಸಕಾನಿಅ(ವಾಯವ್ಯ)–2 | 04 |
| 11. | ಸಕಾನಿಅ(ದಕ್ಷಿಣ)–2 | 04 |
| 12. | ಸಕಾನಿಅ(ಪೂರ್ವ)–3 | 02 |
| 13. | ಸಕಾನಿಅ(ಆಗ್ನೇಯ)–1 | 04 |
| 14. | ಸಕಾನಿಅ(ಪೂರ್ವ)–2 | 02 |
| 15. | ಸಕಾನಿಅ(ಈಶಾನ್ಯ)–1 | 04 |
| 16. | ಸಕಾನಿಅ(ಪಶ್ಚಿಮ)–3 | 03 |
| **ಒಟ್ಟು** | | **59** |

**ಷರತ್ತು ಮತ್ತು ನಿಬಂಧನೆಗಳು:**

1. ನಿವೃತ್ತ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲಾದ ಮಾಪನ ಓದುಗ ಹುದ್ದೆಯಲ್ಲಿ ಕಾರ್ಯ ನಿರ್ವಹಣೆಯಲ್ಲಿ ಯಾವುದೇ ಲೋಪದೋಷ ಅಥವಾ ಅವ್ಯವಹಾರಗಳು ಕಂಡುಬಂದಲ್ಲಿ ಅಂತಹ ನೌಕರರ ಮಾಸಿಕ ಪಿಂಚಣಿಯಿಂದ ಮಂಡಳಿಗೆ ನಷ್ಟವಾದ ಮೊತ್ತವನ್ನು ಕಡಿತಗೊಳಿಸಲಾಗುವುದು ಹಾಗೂ ಯಾವುದೇ ಸಂದರ್ಭದಲ್ಲಿ ನಿವೃತ್ತ ನೌಕರರನ್ನು ಗುತ್ತಿಗೆ ಅಧಾರದಿಂದ ತೆಗೆದುಹಾಕುವ ಷರತ್ತಿನನ್ವಯ ನಿವೃತ್ತ ನೌಕರರು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ನೀಡಬೇಕು.
2. ನಿವೃತ್ತ ನೌಕರರ ಮಾಸಿಕ ಸಂಭಾವನೆಯಲ್ಲಿ ರೂ.50,000/–ಗಳನ್ನು ಎರಡು ಅಥವಾ ಮೂರು ಕಂತುಗಳಲ್ಲಿ ಕಟಾವಣೆ ಮಾಡಿ ಸದರಿ ಮೊತ್ತವನ್ನು ಆಯಾ ವಿಭಾಗ ಕಛೇರಿಗಳಲ್ಲಿ ಸುರಕ್ಷತಾ ಠೇವಣಿಯಾಗಿ ಕಾಯ್ದಿರಿಸಲಾಗುವುದು.

ಮಂಡಳಿಯಲ್ಲಿ ವಿಧಿಸುವ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿ ಮಾಪನ ಓದುಗ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಇಚ್ಛೆಯುಳ್ಳ ನಿವೃತ್ತ ನೌಕರರು ತಮ್ಮ ವೈಯಕ್ತಿಕ ವಿವರ, ಸರ್ಕಾರಿ ಸೇವೆ ಸಲ್ಲಿಸಿರುವ ವಿವರ ಹಾಗೂ ಪಿಂಚಣಿ ಪುಸ್ತಕದ ನಕಲು ಪ್ರತಿಯ ವಿವರಗಳೊಂದಿಗೆ **"ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, 1ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು"** ಇವರ ಮುಂದೆ ಖುದ್ದು ಹಾಜರಾಗಿ ಅರ್ಜಿಯನ್ನು ಸಲ್ಲಿಸುವುದು. ಅರ್ಜಿಯನ್ನು ಸಲ್ಲಿಸಲು ದಿನಾಂಕ: **17.03.2018** ರಂದು ಕೊನೆಯ ದಿನಾಂಕವಾಗಿರುತ್ತದೆ. ಈ ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಗಳು ಹಾಗೂ ಷರತ್ತುಗಳ ಇನ್ನಿತರ ಮಾಹಿತಿಯನ್ನು ಕಛೇರಿಯ ಕರ್ತವ್ಯ ವೇಳೆ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5.30 ಗಂಟೆಯೊಳಗೆ ಪಡೆಯುವುದು.

21/2

**ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ**
**ಬೆಂಗಳೂರು ಜಲಮಂಡಳಿ.**

PN 21/02/18
21/2/18

ಪ್ರತಿಯನ್ನು ಸಾರ್ವಜನಿಕ ಪ್ರಕಟಣೆಗಾಗಿ.